

# ಕತ್ತಲೆಯೇ?
# ಇನ್ನೊಮ್ಮೆ ತಿರುಗಿ ನೋಡಿ

ಬದುಕಿನ ಕುರಿತ ನಮ್ಮ ನಿರೀಕ್ಷೆಗಳಿಗೆ ಹೊಸ ಹೊಳಪನ್ನು ಕೊಡುವ ಹೊಸ ವರ್ಷ, ಹೊಸ ಜೀವನೋತ್ಸಾಹವನ್ನೂ ನೀಡುತ್ತದೆ. ಭರವಸೆಗಳ ಮಿಂಚುಗೊಂಚಲಿನೊಂದಿಗೆ ವರ್ತಮಾನದ ನೂರೆಂಟು ಆತಂಕಗಳೂ ಹೊಸ ವರ್ಷದಲ್ಲಿ ಮುಂದುವರೆಯುತ್ತವೆ. ಈ ಅಡಚಣೆ–ಆತಂಕಗಳ ಜೊತೆಗೇ ನಮ್ಮ ನಾಳೆಗಳನ್ನು ಸಹನೀಯಗೊಳಿಸಬಹುದಾದ ಸಂಗತಿಗಳ ಬಗ್ಗೆ ಯೋಚಿಸುವುದು ಅನಿವಾರ್ಯ. ಸದ್ಯ ವಿಶ್ವವನ್ನು ಆವರಿಸಿಕೊಂಡಿರುವ ವಿದ್ಯಮಾನಗಳನ್ನು ಚರ್ಚಿಸುವ ಹೊಸ ವರ್ಷದ ಈ ಆರಂಭಿಕ ಬರಹ, ನಮ್ಮ ಬದುಕು ಹಾಗೂ ಚಿಂತನೆ ಸಾಗಬೇಕಾದ ದಿಕ್ಕಿನತ್ತ ಬೆಳಕು ಚೆಲ್ಲುವಂತಿದೆ. 2025ರಲ್ಲಿ ಜಗತ್ತು ಮತ್ತಷ್ಟು ಮಾನವೀಯಗೊಳ್ಳಲಿ ಎಂದು ಹಾರೈಸುವ ‘ಸುಧಾ’, ಎಲ್ಲ ಓದುಗರಿಗೂ ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತ, ಈ ವಿಶೇಷ ಬರಹವನ್ನು ಪ್ರಸ್ತುತಪಡಿಸುತ್ತಿದೆ.

■ **ಕಾವ್ಯಾ ಕಡಮೆ**